# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 311 |
| ವಿಧಾನ ಪರಿಷತ್ತು ಸದಸ್ಯರ ಹೆಸರು | : | ಶ್ರೀ ಎಸ್ ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 09.12.2020 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಎಲ್ಲೆಲ್ಲಿ ಭತ್ತ ಖರೀದಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ; (ವಿವರ ಒದಗಿಸುವುದು) ಎಲ್ಲೆಲ್ಲಿ ಭತ್ತ ಖರೀದಿ ಕೇಂದ್ರಗಳನ್ನು ಸ್ಥಾಪಿಸಬೇಕೆಂದು ರೈತರಿಂದ ಬೇಡಿಕೆ ಬಂದಿದೆ; ಬೇಡಿಕೆ ಬಂದ ಕಡೆ ಭತ್ತ ಖರೀದಿ ಕೇಂದ್ರ ಸ್ಥಾಪಿಸಲು ಕ್ರಮ ತೆಗೆದುಕೊಳ್ಳಲಾಗುವುದೇ; | ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಭತ್ತ ಖರೀದಿಸಲು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ತೆರಯಲಾಗಿರುವ ಖರೀದಿ ಕೇಂದ್ರಗಳ ವಿವರ ಈ ಕೆಳಕಂಡಂತಿವೆ: |

ಮೈಸೂರು:

| ತಾಲ್ಲೂಕು | ಖರೀದಿ ಕೇಂದ್ರಗಳ ಹೆಸರು |
|---|---|
| ಹೆಚ್.ಡಿ.ಕೋಟೆ | ಎ.ಪಿ.ಎಂ.ಸಿ ಆವರಣ ಸರಗೂರು |
| ಹುಣಸೂರು | ಎ.ಪಿ.ಎಂ.ಸಿ ಆವರಣ ಹುಣಸೂರು<br>ಎ.ಪಿ.ಎಂ.ಸಿ ಆವರಣ ರತ್ನಪುರಿ |
| ಕೆ.ಆರ್.ನಗರ | ಎ.ಪಿ.ಎಂ.ಸಿ ಆವರಣ ಕೆ.ಆರ್.ನಗರ<br>ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆ ಉಗ್ರಾಣ, ಚುಂಚನಕಟ್ಟೆ |
| ಮೈಸೂರು | ಎ.ಪಿ.ಎಂ.ಸಿ ಆವರಣ, ಬಂಡಿಪಾಳ್ಯ, ಮೈಸೂರು |
| ನಂಜನಗೂಡು | ಎ.ಪಿ.ಎಂ.ಸಿ ಆವರಣ, ನಂಜನಗೂಡು<br>ಬಿಳಿಗೆರೆ ಖರೀದಿ ಕೇಂದ್ರ. |
| ಪಿರಿಯಾಪಟ್ಟಣ | ಎ.ಪಿ.ಎಂ.ಸಿ ಆವರಣ, ಪಿರಿಯಾಪಟ್ಟಣ<br>ಎ.ಪಿ.ಎಂ.ಸಿ ಆವರಣ, ಬೆಟ್ಟದಪುರ |
| ಟಿ.ನರಸೀಪುರ | ಎ.ಪಿ.ಎಂ.ಸಿ ಆವರಣ, ಟಿ.ನರಸೀಪುರ<br>ಎ.ಪಿ.ಎಂ.ಸಿ ಆವರಣ, ಬನ್ನೂರು |

ಚಾಮರಾಜನಗರ:

| ತಾಲ್ಲೂಕು | ಖರೀದಿ ಕೇಂದ್ರಗಳ ಹೆಸರು |
|---|---|
| ಚಾಮರಾಜನಗರ | 1) ಎ.ಪಿ.ಎಂ.ಸಿ ಯಾರ್ಡ್ ಆವರಣ, ಚಾಮರಾಜನಗರ<br>2) ಎಪಿಎಂಸಿ ಯಾರ್ಡ್ ಆವರಣ, ಸಂತೇಮರಳ್ಳಿ. |
| ಕೊಳ್ಳೇಗಾಲ | ಎ.ಪಿ.ಎಂ.ಸಿ ಆವರಣ, ಕೊಳ್ಳೇಗಾಲ |
| ಯಳಂದೂರು | ಟಿಎಪಿಸಿಎಂಎಸ್ ಆವರಣ, ಯಳಂದೂರು |
| ಗುಂಡ್ಲುಪೇಟೆ | ಎ.ಪಿ.ಎಂ.ಸಿ ಆವರಣ, ಗುಂಡ್ಲುಪೇಟೆ |
| ಹನೂರು | ಎ.ಪಿ.ಎಂ.ಸಿ ಯಾರ್ಡ್ ಆವರಣ, ಹನೂರು |

ರೈತರ ಬೇಡಿಕೆಯನುಸಾರ ಮೇಲ್ಕಂಡ ಸ್ಥಳಗಳಲ್ಲಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ. ಹೆಚ್ಚುವರಿಯಾಗಿ ಖರೀದಿ ಕೇಂದ್ರಗಳನ್ನು ತೆರೆಯಲು ರೈತರಿಂದ ಬೇಡಿಕೆ ಬಂದಲ್ಲಿ, ಪರಿಶೀಲಿಸಿ ಕ್ರಮವಹಿಸಲಾಗುವುದು.

| | | |
|---|---|---|
| ಆ | ಭತ್ತ ಖರೀದಿಗೆ ನಿಗದಿಗೊಳಿಸಿರುವ ಬೆಂಬಲ ಬೆಲೆ ಮತ್ತು ಖರೀದಿಗೆ ವಿಧಿಸಿರುವ ಮಿತಿ ಎಷ್ಟು; ಇದುವರೆಗೆ ಎಷ್ಟು ಭತ್ತವನ್ನು ಖರೀದಿಸಲಾಗಿದೆ; ಎಲ್ಲಿಯವರೆಗೆ ಈ ಭತ್ತ ಖರೀದಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ; | 2020-21ನೇ ಸಾಲಿನ ಮುಂಗಾರು ಋತುವಿಗೆ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಭತ್ತ ಸಾಮಾನ್ಯಕ್ಕೆ ರೂ. 1868/-ಗಳನ್ನು ಹಾಗೂ ಭತ್ತ ಗ್ರೇಡ್- ಎ ಗೆ ರೂ. 1888/-ಗಳನ್ನು ನಿಗಧಿಪಡಿಸಿದೆ.<br>ಪ್ರತಿ ರೈತರಿಂದ ಉತ್ಪಾದನೆಗನುಗುಣವಾಗಿ ಪ್ರತಿ ಎಕರೆಗೆ 16 ಕ್ವಿಂಟಾಲ್ ನಂತೆ ಗರಿಷ್ಠ 40 ಕ್ವಿಂಟಾಲ್ ಭತ್ತ ಖರೀದಿಯ ಮಿತಿಯನ್ನು ನಿಗಧಿಪಡಿಸಲಾಗಿರುತ್ತದೆ.<br>ಪ್ರಸ್ತುತ ಭತ್ತ ಖರೀದಿಗಾಗಿ ರೈತರ ನೋಂದಣಿ ಪ್ರಕ್ರಿಯ ಜಾರಿಯಲ್ಲಿದ್ದು, ಸರ್ಕಾರದ ಆದೇಶದಲ್ಲಿ ನಿಗಧಿಪಡಿಸಿದ ವೇಳಾಪಟ್ಟಿಯಂತೆ ದಿನಾಂಕ: 20-12-2020ರಿಂದ 21.03.2021 ರವರೆಗೆ ರೈತರಿಂದ ಭತ್ತವನ್ನು ಖರೀದಿಸಲಾಗುವುದು. |
| ಇ | ಭತ್ತ ಖರೀದಿ ಕೇಂದ್ರಗಳ ಮೂಲಕ ಭತ್ತ ಖರೀದಿಗೆ ವಿಧಿಸಿರುವ ಪ್ರಕ್ರಿಯೆಗಳನ್ನು ಸರಳೀಕರಣಗೊಳಿಸಲಾಗುವುದೇ? | ಭತ್ತ ಖರೀದಿಯನ್ನು ಸಂಪೂರ್ಣವಾಗಿ ಗಣಕೀಕರಣಗೊಳಿಸಲಾಗಿದ್ದು, ರೈತರ ಬೆಳೆ ಮಾಹಿತಿಗಳನ್ನು ಕೃಷಿ ಇಲಾಖೆಯ ಫ್ರೂಟ್ಸ್(FRUITS) ದಂತ್ಮಾಂಶದಿಂದ ಪಡೆದು ಖರೀದಿ ಪ್ರಮಾಣವನ್ನು ಆನ್‌ಲೈನ್ ಮೂಲಕವೇ ನಿರ್ಧರಿಸಲಾಗುತ್ತಿದ್ದು, ಭತ್ತ ಖರೀದಿಯ ಹಣವನ್ನು ನೇರವಾಗಿ ಡಿಬಿಟಿ ಮುಖಾಂತರ ರೈತರ ಬ್ಯಾಂಕ್ ಖಾತೆಗೆ ಪಾವತಿಸಲಾಗುವುದು. |

ಆನಾಸ 145 ಆರ್‌ಪಿಆರ್ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)

ಆಹಾರ, ನಾಗರಿಕ ಸರಬರಾಜು ಮತ್ತು

ಗ್ರಾಹಕರ ವ್ಯವಹಾರಗಳ ಹಾಗೂ

ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.